ಮೂಲ ದಾವಾ ನಂಃ 115/2020
ಪಿ ಡಬ್ಲುಃ 02.

ಸಾಕ್ಷಿಯನ್ನು ದಿನಾಂಕಃ **01.08.2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ವಿ.ಎ. ವಕೀಲರಿಂದಃ**

ದಾವೆಯನ್ನು ಹೂಡಲು ನಮ್ಮ ತಂದೆಯವರು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದಾರೆ. ದಾವಾ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನನ್ನ ತಂದೆಗೆ ಮಾಹಿತಿ ಇರುತ್ತದೆ. ನಾನು ನನ್ನ ತಂದೆಯಿಂದ ಪವರ್ ಆಫ್ ಅಟಾರ್ನಿಯನ್ನು ಪಡೆದಿದ್ದೇನೆ. ನಾನು ನ್ಯಾಯಾಲಯದ ಮುಂದೆ ಸದ್ರಿ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿದ್ದೇನೆ. ದಾವಾ ಸ್ಥಳದ ಸ.ನಂಃ 52/6, ಕ್ಷೇತ್ರ 9 ಗುಂಟೆ ಆಗಿರುತ್ತದೆ. ಸದ್ರಿ ದಾವಾ ಸ್ಥಳವು ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ದಾವಾ ಸ್ಥಳದ ಸುತ್ತಲೂ ಪಾಗಾರ ಹಾಗೂ ದಬ್ಬೆ ಬೇಲಿ ಇರುತ್ತದೆ. ಸದ್ರಿ ದಾವಾ ಸ್ಥಳದ ಲಗ್ತದಾರರು ಬೇರೆಯವರಿದ್ದು, ಅವರಿಗೂ ಸಹ ಜಮೀನಿರುತ್ತದೆ.

ದಾವಾ ಸ್ಥಳದ ಉತ್ತರಕ್ಕೆ ಸ.ನಂಃ 143/3 ಜಾಗವಿದ್ದು, ಅದರ ಮಾಲೀಕರ ಹೆಸರು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ದಾವಾ ಸ್ಥಳದ ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಸ್ಥಳದ ಪಶ್ಚಿಮಕ್ಕೆ ಚಿಪ್ಪಿಯ ಹೊಂಡ ಇರುತ್ತದೆ, ಆದರೆ ಅದು ಯಾರದ್ದು ಎಂಬುದು ಗೊತ್ತಿಲ್ಲ. ದಾವಾ ಸ್ಥಳದ ಪೂರ್ವಕ್ಕೆ ದುರ್ಗು ಮುಕ್ರಿಯವರ ಜಾಗ ಇರುತ್ತದೆ, ಅದರ ಸರ್ವೆ ನಂಃ 52/5 ಇರುತ್ತದೆ. ನಮ್ಮ ದಾವಾ ಸ್ಥಳವು ರಸ್ತೆಗೆ ತಾಗಿದೆ ಎಂದರೆ ಸರಿ. ದಾವಾ ಸ್ಥಳದಲ್ಲಿ ನಮ್ಮ ಮನೆ ಇರುತ್ತದೆ. ಸದ್ರಿ ಮನೆಯು RCC ಕಟ್ಟಡವಾಗಿದ್ದು, ಅದನ್ನು ಸುಮಾರು 14-15 ವರ್ಷಗಳ ಹಿಂದೆ ಕಟ್ಟಿದ್ದೇವೆ. ಸದ್ರಿ ದಾವಾ ಸ್ಥಳದ ಸರ್ವೆಯನ್ನು ನನ್ನ ತಂದೆಯವರು ಮನೆ ಕಟ್ಟುವಾಗ ಮಾಡಿಸಿದ್ದಾರೆ. ಸದ್ರಿ ದಾವಾ ಸ್ಥಳದಲ್ಲಿ ಮನೆಯನ್ನು ಕಟ್ಟುವಾಗ ನಾವು ಪಂಚಾಯತಿಯಿಂದ ಅನುಮತಿಯನ್ನು ಪಡೆದಿದ್ದೇವೆ.

ಪ್ರತಿವಾದಿಯರು ದಾವಾ ಸ್ಥಳದ ಉತ್ತರ ದಿಕ್ಕಿನ ಕಡೆಗೆ ದಾವಾ ಸ್ಥಳದ ಲಗ್ತದಾರರಾಗಿರುತ್ತಾರೆ. ನಾವು ದಾವೆಯಲ್ಲಿ ಸ್ಪಷ್ಟವಾಗಿ ದಾವಾ ಸ್ಥಳದ ಚತುರ್ಗಡಿಯನ್ನು ನಮೂದಿಸಿರುವುದಿಲ್ಲ. ದಾವಾ ಸ್ಥಳವು ಭಾಗಾಯತ ಜಮೀನು ಆಗಿದ್ದು, ಅದರಲ್ಲಿ ತೆಂಗು ಮತ್ತು ಅಡಿಕೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ಜಾಗದಲ್ಲಿಯೂ ಸಹ ಅಡಿಕೆ ಜಮೀನು ಇರುತ್ತದೆ. ಪ್ರತಿವಾದಿಯರು ಸಹ ತಮ್ಮ ಜಾಗಗಳನ್ನು ಸರ್ವೆ ಮಾಡಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಸ್ಥಳಗಳ ಹದ್ದು ಬಸ್ತ ಸರ್ವೆಗಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಪ್ರತಿವಾದಿಯರ ಜಾಗ ಸರ್ವೆಯನ್ನು ಮಾಡುವ ಕಾಲಕ್ಕೆ ಆ ಜಮೀನಿನ ಲಗ್ತದಾರರಿಗೆ ಹಾಗೂ ನನ್ನ ತಂದೆಗೆ ನೋಟಿಸನ್ನು ನೀಡಿದ್ದರು ಎಂದರೆ ಸರಿ. ತದನಂತರ ಮೋಜಣಿಯವರು ಸದ್ರಿ ಪ್ರತಿವಾದಿಯವರ ಸ್ಥಳಕ್ಕೆ ಬಂದು ಮೋಜಣಿ ಕಾರ್ಯವನ್ನು ಕೈಗೊಂಡಿದ್ದಾರೆ ಎಂದರೆ ಸರಿ ಹಾಗೂ ಸದ್ರಿ ಪ್ರತಿವಾದಿಯರೂ ಸಹ ಅವರ ಸ್ಥಳದಲ್ಲಿ ಸರ್ವೆ ಮಾಡುವ ಕಾಲಕ್ಕೆ ಸ್ಪಷ್ಟವಾಗಿ ಹದ್ದುಬಸ್ತ ಸರ್ವೆಯನ್ನು ಮಾಡಿ ಕಲ್ಲುಗಳನ್ನು ಹುಗಿದಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ಜಾಗದ ನಕಾಶೆಯನ್ನು ಪಡೆದ ಬಗ್ಗೆ ನನಗೆ ಗೊತ್ತಿಲ್ಲ, ನಮ್ಮ ತಂದೆಯವರಿಗೆ ಗೊತ್ತಿರುತ್ತದೆ. ಸದ್ರಿ ಪ್ರತಿವಾದಿಯರ ಜಾಗದ ಸರ್ವೆ ನಕಾಶೆಯನ್ನು ನಾನು ತೆಗೆಸಿ ನೋಡಿದ್ದೇನೆ, ಸದ್ರಿ ಪ್ರತಿ ನನ್ನ ಹತ್ತಿರ ಇರುತ್ತದೆ. ಸದ್ರಿ ಸರ್ವೆ

ನಕಾಶೆಯಲ್ಲಿ ನಾವು 3 ಗುಂಟೆ ಪ್ರತಿವಾದಿಯರ ಜಾಗವನ್ನು ಅತಿಕ್ರಮಣ ಮಾಡಿದ್ದೇವೆ ಎಂದು ನಮೂದಿಸಿದ್ದೀರಾ ಎಂದಾಗ ಸಾಕ್ಷಿಯು ನಾವು ಅತಿಕ್ರಮಣ ಮಾಡಿಲ್ಲ ಎಂಬುದಾಗಿ ನುಡಿದಿರುತ್ತಾರೆ. ನಕಾಶೆಯನ್ನು ಯಾವ ರೀತಿ ತಯಾರು ಮಾಡಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯರ ಜಾಗದ ಸರ್ವೆ ನಕಾಶೆಯು ಸರಿ ಇದೆಯಾ ಎಂದು ಕೇಳಿದಾಗ ಸಾಕ್ಷಿಯು ನಾನು ಅದನ್ನು ನೋಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ.

ಈ ದಾವೆಗೆ ಪ್ರತಿವಾದಿಯರು ತಮ್ಮ ಉದಾಹರಣೆಯನ್ನು ಸಲ್ಲಿಸಿದ್ದು, ಅದನ್ನು ನಾನು ಓದಿ ನೋಡಿದ್ದೇನೆ. ಪ್ರತಿವಾದಿಯರು ತಮ್ಮ ಉದಾಹರಣೆಯಲ್ಲಿ ನಾವು 3 ಗುಂಟೆ ಜಾಗವನ್ನು ಅತಿಕ್ರಮಣ ಮಾಡಿದ್ದೇವೆ ಎಂದು ನಮೂದಿಸಿದ್ದಾರೆ ಹಾಗೂ ಅದರ ಮೇಲೆ ನೀವು ಕ್ರಮ ತೆಗೆದುಕೊಂಡಿದ್ದೀರಾ ಎಂದಾಗ ಸಾಕ್ಷಿಯು ಸುಮ್ಮನಿರುತ್ತಾರೆ. ಪ್ರತಿವಾದಿಯರು ನಮ್ಮ ದಾವಾ ಸ್ಥಳದ ಲಗ್ತ ಉತ್ತರ ದಿಕ್ಕಿಗೆ ಇದ್ದು ಅವರು ಗಡಿ ಬೇಲಿಯನ್ನು ಹಾಕಿಕೊಂಡಿರುವುದು ಸರಿ ಇದೆಯಾ ಎಂದು ಕೇಳಿದಾಗ ಸಾಕ್ಷಿಯು ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಪ್ರತಿವಾದಿಯರು ದಾವಾ ಸ್ಥಳವನ್ನು ಅತಿಕ್ರಮಿಸಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರಿದು ನಮ್ಮ ಜಾಗದ ಕಬ್ಜಾ ನಮ್ಮ ಹತ್ತಿರ ಇರುತ್ತದೆ ಎಂಬುದಾಗಿ ನುಡಿದಿರುತ್ತಾರೆ.

ಪ್ರತಿವಾದಿಯರು ನಮ್ಮ ದಾವಾ ಸ್ಥಳದ ಬೇಲಿಯನ್ನು ನಾಶ ಮಾಡಿದ್ದಾರಾ ಎಂದಾಗ ಸಾಕ್ಷಿಯು ಹೌದು ಅವರು ದಾವಾ ಸ್ಥಳವನ್ನು ಅತಿಕ್ರಮಿಸಲು ಬರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ. ಪ್ರತಿವಾದಿಯರು ನಮ್ಮ ಮೇಲೆ ಎರಡು ಪ್ರಕರಣವನ್ನು ದಾಖಲಿಸಿರುತ್ತಾರೆ. ನಾವು ಈ ದಾವೆಯನ್ನು ದಾಖಲಿಸಿದ ತರುವಾಯ ಅಂದರೆ 2020 ನೇ ಸಾಲಿನಲ್ಲಿ ಪ್ರತಿವಾದಿಯರು ನಮ್ಮ ಜಾಗದಲ್ಲಿ ಇದ್ದಂತಹ 3 ಸಾವಿರ ಕಲ್ಲುಗಳನ್ನು ತೆಗೆದುಕೊಂಡು ಅವರ ಜಾಗದ ಉತ್ತರ ದಿಕ್ಕಿಗೆ ಪಾಗಾರ ಹಾಕಿಕೊಂಡಿದ್ದಾರೆ ಎಂಬುದಾಗಿ ನುಡಿದಿರುತ್ತಾರೆ ಹಾಗೂ ಹಿಂಬದಿಯಲ್ಲೂ ಸಹ ಪಾಗಾರ ಹಾಕಿದ್ದಾರೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಸದ್ರಿ ಕಲ್ಲುಗಳನ್ನು ತೆಗೆದುಕೊಂಡು ಹೋದ ವಿಷಯವನ್ನು ನಾವು ನ್ಯಾಯಾಲಯದ ಮುಂದೆ ಹೇಳಿಲ್ಲ ಆದರೆ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯು ಈ ಹಂತದಲ್ಲಿ ಮುಂದುವರಿದು ನಾವು SC-ST ಪ್ರಕರಣದಲ್ಲಿ ಒಳಗಡೆ ಇದ್ದಾಗ ಪ್ರತಿವಾದಿಯರು ನಮ್ಮ ಜಾಗಗಳಲ್ಲಿ ಇರುವ ಕಲ್ಲುಗಳನ್ನು ತೆಗೆದುಕೊಂಡು ಹೋಗಿ ಪಾಗಾರ ಹಾಕಿರುತ್ತಾರೆ, ಅದನ್ನು ನಾನು ನೋಡಿರುವುದಿಲ್ಲ, ಆದರೆ ಸದ್ರಿ ಕಲ್ಲುಗಳು ನಮಗೆ ಸಂಬಂಧಪಟ್ಟ ಕಲ್ಲುಗಳಾಗಿರುತ್ತವೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಪ್ರತಿವಾದಿಯರು ನನ್ನ ಹಾಗೂ ನನ್ನ ತಂದೆ ತಾಯಿ ಮತ್ತು ನನ್ನ ನಾಲ್ಕು ಜನ ಸಹೋದರ ಸಹೋದರಿಯರ ಮೇಲೆ SC-ST ಕಾಯ್ದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ. ನಮ್ಮ ದಾವಾ ಸ್ಥಳದ ಸುತ್ತಲೂ ಈಗ ಪಾಗಾರ ಇರುತ್ತದೆ ಎಂದರೆ ಸರಿ.

ಪ್ರತಿವಾದಿಯರು ನಮಗೆ ಸೇರಿದ ಕಲ್ಲುಗಳನ್ನು ತೆಗೆದುಕೊಂಡು ಪಾಗಾರ ಕಟ್ಟಿದ್ದಾರೆ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಕಾಲಕ್ಕೂ ದಾವಾ ಸ್ಥಳದ ಬೇಲಿಯನ್ನು ನಾಶಪಡಿಸಿಲ್ಲ ಎಂದರೆ ಸರಿಯಲ್ಲ ಹಾಗೂ ನಮ್ಮ ಜಾಗವನ್ನು ಒತ್ತುವರಿ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ಜಾಗಗಳು ಪ್ರತ್ಯೇಕ ಪ್ರತ್ಯೇಕ ಇದ್ದು, ಅದರ ನಡುವೆ ಅಂದಾಜು 3 ಫೂಟ್ ಎತ್ತರದ ಪಾಗಾರ ಇರುತ್ತದೆ. ಪ್ರತಿವಾದಿಯರು ಅವರ ಸರ್ವೆ ನಂಃ 143/3 ರಲ್ಲಿ ಅವರ ಮನೆ ಕಟ್ಟಿಸಿದ್ದು, ಸದ್ರಿ ಸ್ಥಳದಲ್ಲಿ ತೆಂಗು, ಅಡಿಕೆ ಇದೆ ಎಂದರೆ ಸರಿ. ನಾವೇ ಪ್ರತಿವಾದಿಯರ 3 ಗುಂಟೆ ಜಾಗವನ್ನು ಅತಿಕ್ರಮಣ ಮಾಡಿ ಅದನ್ನು ಒಳಗೆ ಹಾಕಿಕೊಳ್ಳುವ ದುರುದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ಥಳದ ಬದಿಗೆ ರಸ್ತೆಗೆ

ಹೋಗಲು ಪ್ರತಿವಾದಿಯರಿಗೆ ಪ್ರತ್ಯೇಕ ದಾರಿ ಇದೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರಿಗೆ ಜಾತಿ ನಿಂದನೆ ಮಾಡಿದ್ದರಿಂದ ಅವರು ನಮ್ಮ ವಿರುದ್ಧ. SC-ST ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡಲು ಯಾವುದೇ ಕಾರಣಗಳಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.